## ಮೂಗಿನ ಹಾಡು

‘ಮೂಗು ಏನು ಮಹಾ!’ ಎಂದು
ಮೂಗು ಮುರಿಯಬೇಡಿರಿ
ಮೂಗ ಕುರಿತು ಮರುಕವಿರಿಸಿ
ಮೂಗ ಹಾಡ ಕೇಳಿರಿ.

ನಾವು ಹೋದ ಕಡೆಯಲೆಲ್ಲ
ನಮ್ಮ ಮೂಗು ಬರುವುದು
ಕಣ್ಣು ಮುಚ್ಚಿ ನಿದ್ರಿಸಿದರೂ
ಮೂಗು ಎಚ್ಚರಿರುವುದು.

ವೈರಿಗಳನು ದೂರವಿಡಲು
ಕಟ್ಟಿ ಗೊರಕೆಬೇಲಿ
ಕಾವಲಾಗಿ ಕಾಯುವುದು
ಪಡೆಯದೆ ದಿನಗೂಲಿ.

ಕಣ್ಣಿಗುಂಟು ರೆಪ್ಪೆ ರಕ್ಷೆ
ಕೀಟ ಕಾಟ ಕೊಟ್ಟರೆ;
ಮೂಗಿಗೆಲ್ಲಿ ಅಂಥ ಭಾಗ್ಯ
ಕರ್ಚೀಫನು ಬಿಟ್ಟರೆ?

ಬಾಯಿಗುಂಟು ನಾಲಗೆ, ಜೊತೆಗೆ
ಮೂವತ್ತೆರಡು ಹಲ್ಲಿವೆ
ಪಾಪ, ನಮ್ಮ ಬಡ ಮೂಗಿಗೆ
ಅಂಥದ್ದೆಲ್ಲ ಎಲ್ಲಿವೆ?

ನೆಗಡಿ ಬಂದರೆಷ್ಟು ಕಷ್ಟ
ಬಡಪಾಯಿ ಮೂಗಿಗೆ?!
(ವಿಕ್ಸ್ ಡಬ್ಬಿಯ ಹಾಕಿಕೊಳ್ಳಿ
ನಿಮ್ಮೆಲ್ಲರ ಜೇಬಿಗೆ)

ನಮ್ಮ ನಿಮ್ಮ ಮೂಗುಗಳಿಗೆ
ಒಕ್ಕೊರಲಿನ ಜೈ!
ಸೊರಗುಟ್ಟುವ ಮೂಗಿಗಿರಲಿ
ಒರೆಸುತಿರುವ ಕೈ!



## ಕಪ್ಪೆಯಮ್ಮನ ಕುಟುಂಬ

ವಟವಟಗುಟ್ಟೋ ಕಪ್ಪೆರಾಯರಿಗೆ
ಟ್ರೊಂಯ್‌ಟ್ರೊಂಯ್ ಅನ್ನೋ ಹೆಂಡತಿ
ಮೂವರು ಮಕ್ಕಳು ಕಪ್ಪೆಯಮ್ಮನಿಗೆ
ಈಗ ಅವಳು ಬಾಣಂತಿ.

‘ಟುಣುಕ್’ ಮೊದಲ ಮಗ, ‘ಪುಣುಕ್’ ಎರಡನೆಯವ
ಮೂರನೆಯವನೇ ‘ಗೊದಮೊಟ್ಟೆ’
ತಿಂಡೀಪ್ಪೋತರು ಮೂರೂ ಮಕ್ಕಳು
ಹಸಿವೆಂದರೆ ಕಂಡಾಪಟ್ಟೆ!

ಹಿರಿಯ ಮಗನಿಗೆ ಹಾರುವ ಚಿಟ್ಟೆ
ಎರಡನೆಯಾತಗೆ ಬಿಳಿ ಜಿರಳೆ
ಮೂರನೆಯವನಿಗೆ ಏನಾದರೂ ಸರಿ
ಆದರೆ ಅವನೋ ಬಲು ತರಳೆ!

ಮೂರು ಹೊತ್ತೂ ಕಪ್ಪೆಯಮ್ಮನಿಗೆ
ಅಡುಗೆಮನೆಯಲ್ಲೇ ದುಡಿತ
ತುರಿಸಿಕೊಳ್ಳಲೂ ಪುರುಸೊತ್ತಿಲ್ಲ
ಮರೆತೇ ಹೋಗಿದೆ ಸಂಗೀತ!

## ವರ್ಷ ಮುಗಿದಾಗ...

ನಿನ್ನ ಕಾಲ ಮುಗಿಯಿತಜ್ಜ
ಇನ್ನು ಹೊರಟು ಬಿಡು
ನಾನು ಬಂದಿದೇನೆ, ನೋಡು
ನನಗೆ ಜಾಗ ಕೊಡು.

ನಿನ್ನ ಮೋರೆ ಮಸುಕಾಗಿದೆ
ಯಾರೂ ನೋಡಲಾರರು
ದಿನದಿನವೂ ನನ್ನ ಕಡೆಗೇ
ನೋಡುತಾರೆ ಎಲ್ಲರೂ.

ಈಗ ನಿನ್ನ ಜಾಗ ಮೂಲೆ;
ನೀನು ರದ್ದಿ ಪೇಪರು!
ನೋಡು ನನ್ನ ಒಡ್ಡೋಲಗ
ಅಂತು ಹೊಸ ಕ್ಯಾಲೆಂಡರು!

